ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	**2013**
ಉತ್ತರ ದಿನಾಂಕ	:	**27.03.2020**

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಆದೇಶ ನೀಡಿ ಮಂಜೂರಾತಿ ನೀಡಲಾಗಿದೆ.	ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟಾರೆಯಾಗಿ 12 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.
ಆ.	ಮಂಜೂರಾತಿ ಆಗದೆ ಬಾಕಿ ಉಳಿದಿರುವ ಯೋಜನೆಗಳೆಷ್ಟು?	ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ 19 ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಪ್ರಸ್ತಾವನೆಗಳಿಗೆ ಮಂಜೂರಾತಿಯಾಗಿರುವುದಿಲ್ಲ.
ಇ.	ಮಂಜೂರಾತಿಯಾಗಿರುವ ಯೋಜನೆಗಳು ಪೂರ್ಣಗೊಂಡಿವೆಯೇ; ಪೂರ್ಣಗೊಳ್ಳದೇ ಇರುವ ಯೋಜನೆಗಳು ಪ್ರಸ್ತುತ ಯಾವ ಸ್ಥಿತಿಯಲ್ಲಿವೆ;	ಶಿವಮೊಗ್ಗ ಜಿಲ್ಲೆಯಲ್ಲಿ ಮಂಜೂರಾದ 12 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಪೈಕಿ 8 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಪೂರ್ಣಗೊಂಡಿರುತ್ತದೆ. ಇದರಲ್ಲಿ 5 ಯೋಜನೆಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಹಂತದಲ್ಲಿವೆ. ಉಳಿದ 3 ಯೋಜನೆಗಳು ಸಿವಿಲ್ ಕಾಮಗಾರಿ ಮುಕ್ತಾಯಗೊಂಡು ಸದರಿ ಗುತ್ತಿಗೆದಾರರಿಂದಲೇ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಲಾಗುತ್ತಿರುತ್ತದೆ. ಪ್ರಗತಿಯಲ್ಲಿರುವ 2 ಕಾಮಗಾರಿಗಳಲ್ಲಿ 1 ಕಾಮಗಾರಿ ಮುಕ್ತಾಯಗೊಳ್ಳುವ ಹಂತದಲ್ಲಿದ್ದು, ಇನ್ನೊಂದು ಕಾಮಗಾರಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಹಾಗೂ ರೈಲ್ವೆ ಇಲಾಖೆಯಿಂದ ರೈಲ್ವೆ ಕ್ರಾಸಿಂಗ್ ಮಾಡಲು ಅನುಮತಿ ದೊರೆತ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. ಇನ್ನುಳಿದ 2 ಕಾಮಗಾರಿಗಳು ಈಗ ಮಂಜೂರಾತಿಯಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ.
ಈ.	ಈ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು; ಬಿಡುಗಡೆಯಾಗಿರುವ ಹಣವೆಷ್ಟು; ಇನ್ನು ಬಿಡುಗಡೆಯಾಗ ಬೇಕಾಗಿರುವ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು.	(ರೂ.ಲಕ್ಷಗಳಲ್ಲಿ) (see table below) ಇನ್ನು ಬಿಡುಗಡೆಯಾಗಬೇಕಾದ ಅನುದಾನವನ್ನು ಕಾಮಗಾರಿಯ ಪ್ರಗತಿಯನುಸಾರ ಬಿಡುಗಡೆ ಮಾಡಲಾಗುವುದು.

(ರೂ.ಲಕ್ಷಗಳಲ್ಲಿ)

ಮಂಜೂರಾದ ಅಂದಾಜು ಮೊತ್ತ	ಬಿಡುಗಡೆಯಾದ ಮೊತ್ತ	ಬಾಕಿ ಬಿಡುಗಡೆಯಾಗಬೇಕಾದ ಮೊತ್ತ
6355.61	4763.74	1591.87

ಸಂ.ಗ್ರಾಕುನೀ&ನೈಇ/131/ಗ್ರಾನೀಸ(5)/2020

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು